ಪರ್ಯಾಯ

# ಸಸ್ಯಮೂಲಗಳಿಂದ ಸ್ಯಾನಿಟೈಸರ್!



ಕೊರೊನಾ ಕಾರಣದಿಂದಾಗಿ ಸ್ಯಾನಿಟೈಸರ್‌ಗಳಿಗೆ ಒಮ್ಮಿಂದೊಮ್ಮೆಗೆ ಬೇಡಿಕೆ ಹೆಚ್ಚಿದೆ. ಈವರೆಗೆ ಸ್ಯಾನಿಟೈಸರ್ ಹೆಸರು ಕೇಳದವರೂ ಈಗದನ್ನು ಬಳಸುವಂತಾಗಿದೆ. ಈ ಸ್ಯಾನಿಟೈಸರ್‌ಗಳನ್ನು ಸಸ್ಯಗಳ ಉತ್ಪನ್ನಗಳಿಂದಲೂ ತಯಾರಿಸಬಹುದು. ಅಂತಹ ಕೆಲವು ಸಾಧ್ಯತೆಗಳನ್ನು ಗಮನಿಸೋಣ.

100 ಗ್ರಾಂ ಬೇವಿನ ಎಲೆಗಳನ್ನು ಸ್ವಚ್ಛವಾಗಿ ತೊಳೆದುಕೊಂಡು, ಅವುಗಳನ್ನು ಒಂದು ಲೀಟರ್ ನೀರಿನಲ್ಲಿ ಹಾಕಿ ಕುದಿಸಬೇಕು. ಚೆನ್ನಾಗಿ ಕುದಿಸಿದ ನೀರಿನಲ್ಲಿ 200 ಗ್ರಾಂ (ಒಂದು ಹಿಡಿಯಷ್ಟು) ತುಳಸಿ ಎಲೆಗಳನ್ನು ಹಾಕಿ ಮತ್ತೆ ಕುದಿಸಿ ತಣ್ಣಗಾಗಲು ಬಿಡಬೇಕು. ಆ ನೀರಿಗೆ ಪಟಕ (Alum) ಮತ್ತು ಕರ್ಪೂರ (Camphor) ಪುಡಿ ಮಾಡಿ ಹಾಕಬೇಕು. (ಪಟಕವು ಉತ್ತಮ ಆ್ಯಂಟಿಸೆಪ್ಟಿಕ್ ದ್ರವ್ಯವಾಗಿದ್ದು ಬ್ಯಾಕ್ಟೀರಿಯಾ ವಿರುದ್ಧ ಹೋರಾಡುವ ಗುಣವನ್ನು ಹೊಂದಿದೆ.) ಅರ್ಧಗಂಟೆಯ ನಂತರ ಈ ಮಿಶ್ರಣವನ್ನು ಸೋಸಿ ಬಾಟಲಿಯಲ್ಲಿ ತುಂಬಿ ಇಟ್ಟುಕೊಂಡು ತಾಸಿಗೊಮ್ಮೆ ಸ್ಯಾನಿಟೈಸರ್ ರೀತಿ ಬಳಸಬಹುದು.

ಕುಮಾರಿರಸ (Alovera), ತುಪ್ಪ ಹಾಗೂ ದುಷ್ಪರಿಣಾಮವಿಲ್ಲದಂತಹ ಆಲ್ಕೋಹಾಲ್ ಒಂದು ಲೀಟರ್ ಹಾಗೂ ಸುಗಂಧ ಪರಿಮಳ ಬರಲು ಅತೀ ಅವಶ್ಯಕವಾದಂತಹ ಯಾವುದಾದರೂ ಸುಗಂಧಭರಿತ ಎಣ್ಣೆಯನ್ನು (ಲ್ಯಾವೆಂಡರ್, ಕೊಬ್ಬರಿ, ಬಾದಾಮಿ ಅಥವಾ ಸಾಸಿವೆ ಎಣ್ಣೆಗಳಲ್ಲೊಂದನ್ನು) ಮಿಶ್ರಣ ಮಾಡಿ, ಸೀಸೆಯಲ್ಲಿ ತುಂಬಿಟ್ಟುಕೊಂಡು ಕೈ ತೊಳೆಯಲು ಉಪಯೋಗಿಸಬಹುದು.

## ಅರಿಷ್ಟಕ (ಅಂಟುವಾಳಕಾಯಿ)

ಅರಿಷ್ಟಕ ಅಥವಾ ಅಂಟುವಾಳಕಾಯಿಯನ್ನು 'ಸಾಬೂನು ಬೀಜ' ಎಂದು ಕರೆಯಲಾಗುತ್ತದೆ. ನಮ್ಮ ದೇಶದ ಹಳ್ಳಿಗಳಲ್ಲಿ ಇಂದಿಗೂ ಸಾಬೂನಿನ ಬದಲಾಗಿ ಅಂಟವಾಳಕಾಯಿಯನ್ನು ನೀರಿನಲ್ಲಿ ಚೆನ್ನಾಗಿ ಕುದಿಸಿ ಅದರಿಂದ ಬರುವ ನೊರೆದ್ರಾವಣದಿಂದ ಬಟ್ಟೆಗಳ ಕೊಳಕನ್ನು ತೆಗೆಯಲಾಗುತ್ತದೆ. ಅಂಟುವಾಳಕಾಯಿ ನಿಸ್ಸಂಶಯವಾಗಿ ಅದ್ಭುತ ಕ್ರಿಮಿನಾಶಕ, ಕೊಳೆನಾಶಕ. ಇದರಲ್ಲಿರುವ ಕ್ಷಾರೀಯ ಗುಣದಿಂದ ಸೂಕ್ಷ್ಮಾಣು (ಜೀವಾಣು) ನಾಶವಾಗುತ್ತದೆ. ಅಂಟವಾಳಕಾಯಿಯ ಸಿಪ್ಪೆಯನ್ನು ಜಜ್ಜಿ ನೀರಿನಲ್ಲಿ ಕುದಿಸಿದಾಗ ಲೀಟರ್‌ಗಟ್ಟಲೆ ದ್ರಾವಣ ತಯಾರಾಗುತ್ತದೆ. ಆ ದ್ರಾವಣ ಒಂದು ಅದ್ಭುತ ಸ್ಯಾನಿಟೈಸರ್. ಭೌಗೋಳಿಕ ಪ್ರದೇಶಗಳಿಗನುಸಾರವಾಗಿ ಅಂಟುವಾಳಕಾಯಿ ಸಸ್ಯಗಳಲ್ಲಿ ವಿವಿಧ ಪ್ರಭೇದಗಳೂ ಇವೆ.

ಅಂಟವಾಳಕಾಯಿ ಅಥವಾ ಅರಿಷ್ಟಕ ಫಲದಲ್ಲಿರುವ ಲ್ಯೂಬ್ರಿಕೆಂಟ್ (ಜಾರುಕದ) ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ. ಬೇರೆ ಬೇರೆ ರೀತಿಯ ಚರ್ಮರೋಗಗಳಲ್ಲಿಯೂ ಅಂಟುವಾಳಕಾಯಿ ಉಪಯುಕ್ತ. ತಲೆಯ ಮೇಲಿನ ಹೊಟ್ಟನ್ನೂ ಹೋಗಲಾಡಿಸುತ್ತದೆ.

## ಶಿರೀಷ ಫಲ ಬೀಜ ದ್ರಾವಣ

ಭಾರತೀಯ ಚಿಕಿತ್ಸಾ ಪದ್ಧತಿಯಲ್ಲಿ ಸ್ನಾನಯೋಗಗಳಲ್ಲಿ, ಧೂಪನ ಯೋಗಗಳಲ್ಲಿ ಶಿರೀಷ ಫಲ ಬೀಜಗಳನ್ನು ಬಳಸಲಾಗುತ್ತದೆ. ಶಿರೀಷ ಒಂದು ಅತ್ಯತ್ತಮ ವಿಷಹರ ದ್ರವ್ಯ. ಹಲವಾರು ವಿಧದ ಚರ್ಮರೋಗಗಳಲ್ಲಿ, ವಿಷರೋಗದಲ್ಲಿ, ಶ್ವಾಸಕಾಸ ರೋಗಗಳಲ್ಲಿ ಶಿರೀಷ ಫಲ ಕಲ್ಪಗಳು ಬಳಕೆಯಲ್ಲಿವೆ. ಶಿರೀಷ ಫಲ ಬೀಜಗಳನ್ನು ಕುಟ್ಟಿ ಪುಡಿ ಮಾಡಿ ಬಿಸಿನೀರಿನ ಜೊತೆಗೆ ಮಿಶ್ರಣಮಾಡಿ